ಶ್ರೀ ಎ.ಎಸ್. ಆತ್ಮಾನಂದ.—ರೇಷ್ಮೆ ಇಲಾಖೆಯೂ ಕೂಡ ಈ ಬಗ್ಗೆ ಸೂಕ್ತ ದಿಸೆಯಲ್ಲಿ ಆಲೋಚನೆ ಮಾಡುತ್ತಿದೆ. ಮಾನ್ಯ ಸದಸ್ಯರಾದ ರಾಜೂಗೌಡರು ಈ ಬಗ್ಗೆ ಕೊಟ್ಟ ಸಲಹೆಯನ್ನು ಜಾರಿಗೆ ತರಲು ರೈತರ ಹಿತದೃಷ್ಟಿಯಿಂದ ಸರಕಾರ ಪರಿಶೀಲಿಸುತ್ತದೆ ಎಂದು ಹೇಳ ಬಯಸುತ್ತೇನೆ.

ಶ್ರೀ ಪಿ.ಜಿ ಆರ್. ಸಿಂಧ್ಯ —ಮಾನ್ಯ ಅಧ್ಯಕ್ಷರೆ, ನನಗೆ ಗೊತ್ತಿರುವ ಹಾಗೆ ರೇಷ್ಮೆ ಬೆಳೆಗಾರರು ಸರಕಾರದಿಂದ ಏನನ್ನೂ ಅಪೇಕ್ಷೆ ಮಾಡುವುದಿಲ್ಲ. ಏಕೆಂದರೆ ಸರಕಾರಿ ರೇಷ್ಮೆ ಬಿತ್ತನೆ ಕೋಠಿಗಳನ್ನು ಮತ್ತು ಖಾಸಗೀ ಕ್ಷೇತ್ರದಲ್ಲಿಯ ಉತ್ಪಾದನೆ, ಬೆಲೆ ಮತ್ತು ಗುಣಮಟ್ಟ ಇತ್ಯಾದಿಗಳನ್ನು ಹೋಲಿಕೆ ಮಾಡಿದ್ದರೆ ಸರಕಾರಕ್ಕಿಂತಲೂ ೧೦೦-೨೦೦ ಪಟ್ಟು ಖಾಸಗೀಯವರು ಚೆನ್ನಾಗಿ ನಿರ್ವಹಿಸಿಕೊಂಡು ಬಂದಿದ್ದಾರೆ. ಮಾನ್ಯ ಸಚಿವರು ಹೇಳಿದ ಹಾಗೆ ಖಾಸಗೀಯವರ ಮೇಲೆ ನಿಯಂತ್ರಣ ಇಡುವುದಕ್ಕೆ ನಿಮ್ಮ ಕೆಳಮಟ್ಟದ ಅಧಿಕಾರಿಗಳಿಗೆ ಕೊಟ್ಟರೆ ಅವರಿಗೆ ಹಣ ಮಾಡುವುದಕ್ಕೆ ಒಂದು ಅನುಕೂಲ ಮಾಡಿ ಕೊಟ್ಟ ಹಾಗೆ ಆಗುತ್ತದೆಯೇ ಹೊರತು ಇದರಿಂದ ಯಾವ ಸಾಧನೆಯೂ ಆಗಲಾರದು ಅನ್ನಿಸುತ್ತದೆ.

ಶ್ರೀ ಎಂ. ಎಸ್. ಆತ್ಮಾನಂದ.— ಖಾಸಗೀಯವರ ಮೇಲೆ ಗುಣನಿಯಂತ್ರಣದ ಬಗ್ಗೆ ಮಾತ್ರ ಸರಕಾರ ಹತೋಟಿ ಇಟ್ಟುಕೊಂಡಿದೆ. ಬೆಲೆ ಬಗ್ಗೆ ಇಲ್ಲ.

ಅಬಕಾರಿ ಹರಾಜಿನಿಂದ ಬಂದ ಆದಾಯ

೮೫೩. ಶ್ರೀ ಎ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್ಕಲ್)—ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ೧೯೯೦-೯೧ ನೇ ಸಾಲಿನಲ್ಲಿ ಅಬಕಾರಿ ಹರಾಜಿನಿಂದ ಎಷ್ಟು ಮೊತ್ತವನ್ನು ನಿರೀಕ್ಷಿಸಲಾಗಿದೆ?

ಆ) ಸರ್ಕಾರಕ್ಕೆ ಎಷ್ಟು ಹೆಚ್ಚಿಗೆ ಪರಮಾನ ಬರುವುದು ?

ಇ) ಇದರಲ್ಲಿಯ ಹಣವನ್ನು ಹಿಂದುಳಿದ ಜನಾಂಗದ ಕಲ್ಯಾಣಕ್ಕಾಗಿ, ವಿಶೇಷವಾಗಿ ಅವರ ಶಿಕ್ಷಣಕ್ಕೋಸ್ಕರ ಖರ್ಚು ಮಾಡಲಾಗುವುದೆ ?

ಈ) ಹಾಗಿದ್ದಲ್ಲಿ ಯೋಜನೆಗಳ ಹೆಸರುಗಳೇನು ?

ಶ್ರೀ. ಎಂ. ರಾಜೇಶ್ವರಮೂರ್ತಿ (ಆರ್ಥಿಕ ಮತ್ತು ಅಬಕಾರಿ ಸಚಿವರು .—

ಅ)	ಹರಾಜಿನಿಂದ ನೇರ ಉತ್ಪನ್ನ	ರೂ. ೩೮೦.೨೧ ಕೋಟಿ
	ಆಪರೋಕ್ಷ ಉತ್ಪನ್ನ (ಹರಾಜು-ಮಾರಾಟ ತೆರಿಗೆ)	೮೦.೩೬ ಕೋಟಿ
	ಒಟ್ಟು ರೂ.	೪೬೦.೫೭ ಕೋಟಿ
ಆ)	ಹರಾಜಿನಿಂದ ಅಧಿಕ ಉತ್ಪನ್ನ	ರೂ. ೨೪೨.೦೦ ಕೋಟಿ
	ಇತರೇ ಉತ್ಪನ್ನ	ರೂ. ೭೨.೦೦ ಕೋಟಿ
	ಒಟ್ಟು ರೂ.	೩೧೪.೦೦ ಕೋಟಿ

ಇ) ಮತ್ತು (ಈ) ಅಧಿಕ ಉತ್ಪನ್ನವನ್ನು ಹೇಗೆ ಖರ್ಚು ಮಾಡಬೇಕೆಂಬುದು ಪರಿಶೀಲನೆಯಲ್ಲಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—The total amount expected from excise auction during 1990-91 is Rs. 380 crore, indirect receipts 102 crore. Total 482 crore. The Government is going to get this year, an additional income Rs. 307 crore. ಹೀಗೆ ತಮಗೆ ಸುಮಾರು ೩೦೭ ಕೋಟಿ ರೂಪಾಯಿಗಳಷ್ಟು ಅಡಿಶನಲ್ ಆದಾಯ ಬರುತ್ತಾ ಇದೆ. ಈ ಅಧಿಕ ಉತ್ಪನ್ನವನ್ನು ಹೇಗೆ ಖರ್ಚು ಮಾಡಬೇಕೆಂಬುದನ್ನು ಸರಕಾರ ಪರಿಶೀಲಿಸುತ್ತಿದೆ ಎಂದು ಹೇಳಿದ್ದೀರಿ. ಇದನ್ನು ಹೇಗೆ ಮತ್ತು ಯಾವ ಪ್ರಮಾಣದಲ್ಲಿ ಯಾವುದಕ್ಕೋಸ್ಕರವಾಗಿ ವೆಚ್ಚ ಮಾಡಲಿದ್ದೀರಿ ಎಂದು ನಿರ್ದಿಷ್ಟವಾಗಿ ಹೇಳ ಬೇಕು. ಏಕೆಂದರೆ ಈ ಒಂದು ಉತ್ಪನ್ನ ಬರುತ್ತಿರುವುದು ಹೆಚ್ಚಾಗಿ ವೀಕರ್ ಸೆಕ್ಷನ್‌ಗಳಿಂದಲೇ ಎಂದು

ನಾನು ಹೇಳಬೇಕಾಗಿಲ್ಲ. ಅದಕ್ಕಾಗಿ ತಾವುಗಳು ಅವರುಗಳ, ಅವರ ಮಕ್ಕಳ ಕಲ್ಯಾಣಕಾರಿ ಯೋಜನೆಗಳಿಗಾಗಿ ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ನಾನು ಕಳೆದ ಸಲ ಕೂಡ ಹೇಳಿದ್ದೆ, ಅಂಥ ಮಕ್ಕಳ ಸಲುವಾಗಿ ಹೊಸ ಹಾಸ್ಟೆಲ್ ಕಟ್ಟಿಡಗಳನ್ನು ಕಟ್ಟಿ ಎಂದು ಸಲಹೆ ಮಾಡಿದ್ದೆ. ಮುಖ್ಯ ಅವರಿಗಾಗಿ ಕೊಡುತ್ತಿದ್ದ ಹಣದ ಮೊತ್ತವನ್ನು ಹೆಚ್ಚು ಮಾಡಿ ಎಂದು ಕೂಡ ಹೇಳಿದ್ದೆ. ಆದರೆ ಮಂತ್ರಿಯವರು ಇದೇ ವರ್ಷ ಮೊತ್ತವನ್ನು ಏರಿಸಿದ್ದೇವೆ ಮತ್ತೆ ಏರಿಸುವುದಿಲ್ಲ ಎಂದು ಹೇಳಿದ್ದಾರೆ. ತಮಗೆ ಗೊತ್ತಿರುವ ಹಾಗೆ ಇತ್ತೀಚೆಗೆ ಎಲ್ಲಾ ವಸ್ತುಗಳ ಬೆಲೆಯು ಏರುತ್ತಾ ಇದೆ, ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಮಕ್ಕಳಿಗೆ ಈ ಬಗ್ಗೆ ಏನು ತೊಂದರೆಯಾಗುತ್ತಾ ಇದೆ ಆ ಬಗ್ಗೆ, ಅಂದರೆ ಸ್ಕಾಲರ್‌ಶಿಪ್, ಹಾಸ್ಟೆಲ್ ಕಟ್ಟಡ ಮುಂತಾದವುಗಳಿಗೆ ಈ ಆದಾಯವನ್ನು ವಿನಿಯೋಗಿಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವಿ. ರಾಜಶೇಖರಮೂರ್ತಿ.—ಮಾನ್ಯ ಅಧ್ಯಕ್ಷರೆ, ಅಬಕಾರಿ ವರ್ಷವು ಜೂನ್ ೩೦ರವರೆಗೆ ಇರುತ್ತದೆ. ಈ ಬಗ್ಗೆ ಒಂದು ಪಟ್ಟಿಯನ್ನು ತಯಾರು ಮಾಡುತ್ತೇನೆ. ಇವೊತ್ತು ಅನೇಕ ಕೇಸ್‌ಗಳು ಕೋರ್ಟ್‌ನಲ್ಲಿ ಪೆಂಡಿಂಗ್ ಇವೆ. ಅಂತೆಯೇ ಆದಾಯ ೩೮೭ ಕೋಟಿ ಅಲ್ಲ, ೩೦೮ ಕೋಟಿ ರೂಪಾಯಿಗಳು ಆಗುತ್ತದೆ. ಈ ಹಣವನ್ನು ಯಾವ ರೀತಿಯಲ್ಲಿ ಎಂತು ಯಾವ ಬಾಬುಗಳಿಗೆ ಖರ್ಚು ಮಾಡಬೇಕೆಂದು ಇನ್ನೂ ಪಟ್ಟಿ ಮಾಡಿಲ್ಲ. ಇಲ್ಲಿ ಚರ್ಚೆ ಮುಗಿದ ಮೇಲೆ, ನಾನು ಆ ಒಂದು ಪಟ್ಟಿಯನ್ನು ತಯಾರು ಮಾಡುತ್ತೇನೆ. ನನ್ನ ಇಲಾಖಾ ಬೇಡಿಕೆಯ ಚರ್ಚೆ ಮುಗಿದ ಮೇಲೆ ಆ ಬಗ್ಗೆ ನಾನು ಒಂದು ಘೋಷಣೆ ಮಾಡುತ್ತೇನೆ, ಮಾನ್ಯ ಸದಸ್ಯರು ವೀಕರ್‌ಸೆಕ್ಷನ್‌ನಿಂದ ಹಣ ಬಂದಿದೆ, ಅವರಿಗಾಗಿ ಖರ್ಚು ಮಾಡಿ ಎಂದು ಹೇಳಿದ್ದಾರೆ. I am not going to disappoint the hon. member. I am going to prepare a statement where all sections of the society are going to get the benefit.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವುಗಳು ಸೆಕೆಂಡ್ಸ್ ಮಾಡಾಟವನ್ನ ನಿಲ್ಲಿಸಿ ನಿಜವಾಗಿಯೂ ಕೋಟ್ಯಾಂತರ ರೂಪಾಯಿಗಳ ಆದಾಯ ಸರಕಾರಕ್ಕೆ ಬರುವಂತೆ ಮಾಡಿದ್ದೀರಿ, ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಈಗ ತಾವುಗಳು ಮೈಸೂರ್ ಸೇಲ್ಸ್ ಇಂಟರ್‌ನ್ಯಾಶನಲ್ ಮುಂಖಾಂತರ ಮಾರಾಟ ಮಾಡುತ್ತಾ ಇದ್ದೀರಿ. ಅವರಿಗೆ ಕಮೀಷನ್ ಕೊಡುತ್ತೀರೋ ? because it is an independent body and ಅದು ಸರಕಾರದ ಒಂದು ಅಧೀನ ಸಂಸ್ಥೆಯಾಗಿದ್ದರೂ ವ್ಯಾಪಾರ ಮಾಡತಕ್ಕಂಥ ಪಹಿವಾಟು ಇಟ್ಟುಕೊಂಡಿದೆ, ಅದುದರಿಂದ ಅವರಿಗೆ ಕಮಿಶನ್ ಕೊಡುತ್ತೀರೋ ಅಥವಾ ನೇರವಾಗಿ ಕಳಂಹಿಸಿದ್ದೆಲ್ಲಾ ಸುಮ್ಮನೆ ಮಾರಾಟ ಮಾಡುವ ವ್ಯವಸ್ಥೆ ಇದೆಯೋ? ಅಥವಾ ಕಮಿಶನ್ ಕೊಡುತ್ತಿದ್ದರೆ ಅದು ಎಷ್ಟು ಎಂದು ತಿಳಿಸಬೇಕು.

ಶ್ರೀ ಎಂ. ವಿ. ರಾಜಶೇಖರಮೂರ್ತಿ.—ನಾವು ಮಾತನಾಡುತ್ತಿರುವುದು ಕೇವಲ ಐ.ಎಂ.ಎಲ್‌ಗೆ ಸಂಬಂಧಪಟ್ಟ ಹಾಗೆ. Only for IML.

SRI M. MALLIKARJUNA KHARGE.—Whether commission is given to them ?

SRI M.V. RAJASHEKARA MURTHY.—They work on commission basis.

ಅಧ್ಯಕ್ಷರು.—ಅಬಕಾರಿ ಇಂದು ವಿಶ್ವವ್ಯಾಪ್ತಿ...

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸಚಿವರು ಅಧಿಕ ಆದಾಯವು ೩೦೮ ಕೋಟಿ ರೂಪಾಯಿಗಳಿ ಎಂದು ಹೇಳಿದರು. ಮಾನ್ಯ ಖರ್ಗೆಯವರು ಆ ಹಣವನ್ನು ಬಡವರಿಗೆ ಮತ್ತು ದುರ್ಬಲರಿಗೆ ಖರ್ಚು ಮಾಡುವ ಯೋಜನೆ ಏನಾದರೂ ಇದೆಯೇ ಎಂದು ಕೇಳಿದ್ದಾರೆ. ರಾಜ್ಯದಲ್ಲಿ ಅನೇಕ ವರ್ಷಗಳಿಂದ ರಸ್ತೆಗಳು ನಾದುರಸ್ತಿ ಸ್ಥಿತಿಯಲ್ಲಿದ್ದು, ರಸ್ತೆಗಳಲ್ಲಿ ಹಳ್ಳಗಳು ಬಿದ್ದು ಯಾರಾದರೂ ಬಿದ್ದರೆ ಅದರಲ್ಲಿಯೇ ಮುಚ್ಚಿಹೋಗಂಥ ಪರಿಸ್ಥಿತಿಯೂ ಇದೆ. ಇಂಥ ಕೆಲಸಗಳಿಗಾದರೂ ಸ್ವಲ್ಪ ಹಣವನ್ನು ವಿನಿಯೋಗ ಮಾಡಲು ಕ್ರಮ ತೆಗೆದುಕೊಳ್ಳುತ್ತೀರಾ? ಅಥವಾ ೨೦ ಅಂಶಗಳ ಕಾರ್ಯಕ್ರಮಕ್ಕೆ ಹೆಚ್ಚಿಗೆ ಹಣವನ್ನು ಕೊಡುವುದಕ್ಕೆ ಸರಕಾರದವರು ಪರಿಶೀಲಿಸುತ್ತಾರೆಯೇ ಎಂದು ದಯವಿಟ್ಟು ತಿಳಿಸಬೇಕು.

SRI M.V. RAJASHEKARA MURTHY.—It is a suggestion for consideration.

ಶ್ರೀ ಕೆ. ಸೋಮಪ್ಪ ಸುವರ್ಣ.—ಮಾನ್ಯ ಅಧ್ಯಕ್ಷರೆ, ಈ ಬಾರಿ ಶೇಂದಿ ಮಾರಾಟವನ್ನು ರದ್ದುಗೊಳಿಸಿದ್ದಾರೆ. ಶೇಂದಿ ವ್ಯಾಪಾರ ಮಾಡಿಕೊಂಡು ಜೀವನ ಮಾಡುತ್ತಿದ್ದವರನ್ನು ಬೀದಿಯಲ್ಲಿ ಬೀಳು

ವಂತೆ ಮಾಡಿದ್ದಾರೆ. ನಮ್ಮ ಸರಕಾರದವರು ಬಡವರಿಗಾಗಿ ಎಷ್ಟೋ ಕಲ್ಯಾಣಕಾರಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅಬಕಾರಿಯಿಂದ ಬರುವ ೩೮೮ ಕೋಟಿ ರೂಪಾಯಿಗಳನ್ನು ಆದಾಯವನ್ನು ಬಡವರಿಗಾಗಿ ವಿನಿಯೋಗಿಸಬೇಕು. ನಮ್ಮ ಜಿಲ್ಲೆಯಲ್ಲಿ ಮಂತ್ರಿಗಳಾದರು ಬೀದಿಯಲ್ಲಿ ಕೆಲಸವಿಲ್ಲದೆ ಅಲೆದಾಡುತ್ತಾ ಇದ್ದಾರೆ, ರೋಧಿಸುತ್ತಾ ಇದ್ದಾರೆ. ಆಕರ ಪರಿಸ್ಥಿತಿಯು ಹದಗೆಟ್ಟಿದೆ. ಆದುದರಿಂದ ಮಾನ್ಯ ಸರಕಾರದವರು ೧೨೮ಕೋಟಿ ರೂಪಾಯಿಗಳನ್ನು ಅವರ ಕಲ್ಯಾಣಕ್ಕಾಗಿ ವಿಂಗಡಿಸಿಟ್ಟಿರಿ, ಆ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಮಾನ್ಯ ಸಚಿವರು ಒಂದು ಘೋಷಣೆಯನ್ನು ಸದನದಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವಿ. ರಾಜಶೇಖರಮೂರ್ತಿ.—ಸರಕಾರ ಯಾರನ್ನೂ ಬೀದಿಪಾಲು ಮಾಡುವ ಉದ್ದೇಶವನ್ನು ಹೊಂದಿಲ್ಲ. ಈ ಕೆಂದಿ ನಿಷೇಧದಿಂದಾಗಿ ನಿರುದ್ಯೋಗಿಗಳಾದವರಿಗೆ ಯಾವ ರೀತಿಯಲ್ಲಿ ಪುನರ್ ಉದ್ಯೋಗ ಕಲ್ಪಿಸಬೇಕೆಂಬ ಬಗ್ಗೆ ಸರಕಾರ ಸೂಕ್ತ ರೀತಿಯಲ್ಲಿ ಪರಿಶೀಲಿಸುತ್ತಿದೆ. ಆ ಬಗ್ಗೆ ಇವೊತ್ತು ಘೋಷಣೆ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸುವರ್ಣರವರೇ, ತಾವು ಹೇಳಿದ ಹಾಗೆ ಒಂದು ನೂರು ಕೋಟಿ ರೂಪಾಯಿಗಳು ಸಾಕೆ ?

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ಒಂದು ಸಂತೋಷ ಏನೆಂದರೆ ಆದಾಯ ಒಂದು ವರ್ಷಕ್ಕೆ ಒಂದು ಕೋಟಿ ರೂಪಾಯಿ ಹೆಚ್ಚಾಗಿ ಹೋಗುತ್ತಿದೆ ಎಂದು ಹೇಳಿದಿರಿ. ಅದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಇದರಲ್ಲಿ ಅಬ್ಕಾರಿ ಎಂದರೆ ಕೇವಲ ಸಾರಾಯಿ ಎನ್ನತಕ್ಕಂಥ ಅರ್ಥದಲ್ಲಿ ತಾವು ಉತ್ತರವನ್ನು ಕೊಟ್ಟಿದ್ದೀರಿ. ಇದರಲ್ಲಿ ಬರತಕ್ಕಂಥ ಆದಾಯದಲ್ಲಿ ಐಎಂಎಫ್‌ಎಲ್ ಯಿಂದ ಎಷ್ಟು ಆದಾಯ ಹೆಚ್ಚಿಗೆ ಬರುತ್ತದೆ ಮತ್ತು ಸಾರಾಯಿನಿಂದ ಎಷ್ಟು ಬರುತ್ತದೆ. ಎರಡನೆಯದಾಗಿ, ಈ ಹಿಂದಿನ ವರ್ಷದಲ್ಲಿ ಎಷ್ಟು ಹಣ ಸೋರಿ ಹೋಗುತ್ತಿತ್ತು ಎಂದು ಈಗ ಸಾಬೀತಾಗಿದೆ. ಈ ರೀತಿ ಸಾಬೀತಾಗಿರುವ ಕಾರಣದಿಂದ ಯಾರ್ಯಾರು ಇದಕ್ಕೆ ಕಾರಣಕರ್ತರಾಗಿದ್ದಾರೆ, ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಎಂ. ವಿ. ರಾಜಶೇಖರಮೂರ್ತಿ.—ಮಾನ್ಯ ಅಧ್ಯಕ್ಷರೇ, ಯಾರ್ಯಾರ ಮೇಲೆ ಏನೇನು ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದು ಈ ಸಭೆಗೆ ಬಿಟ್ಟಿದ್ದು.

ಶ್ರೀ ಕೆ. ಲಕ್ಕಪ್ಪ.—ಒಳ್ಳೆಯ ಆದಾಯ ಬರತಕ್ಕಂಥ ರೀತಿಯಲ್ಲಿ ಕೆಲಸವನ್ನು ಫೈನಾನ್ಸ್, ಮಿನಿಸ್ಟರ್‌ರವರು ಮಾಡಿದ್ದಾರೆ ಎಂದು ಎಲ್ಲರೂ ಕೂಡ ಪ್ರಶಂಸೆ ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇನ್ನು ಹೆಚ್ಚಿಗೆ ಆದಾಯವನ್ನು ನೀವು ಪಡೆಯುವುದಕ್ಕೆ ಅವಕಾಶ ಇತ್ತು. ಉದಾಹರಣೆಗೆ ಈಗ ತುಮಕೂರಿನಲ್ಲಿ ಆಕ್ಷನ್ ಆದಾಗ ರಾಜಕಾರಣಿಗಳು ಮತ್ತು ಅಧಿಕಾರಿಗಳ ಕೈವಾಡದಿಂದ ಅವರಿಗೆ ಬೇಕಾದಂಥವರಿಗೆ ಆಕ್ಷನ್‌ನನ್ನು ನಿಲ್ಲಿಸಬೇಕು ಎನ್ನತಕ್ಕಂಥ ಉದ್ದೇಶದಿಂದ ಹೆಚ್ಚಿಗೆ ಆದಾಯ ಬರತಕ್ಕಂಥವರು ಕೂಗಿದರೂ ಕೂಡಾ ಅದನ್ನು ನಿಲ್ಲಿಸಿ ಅದರಿಂದ ಬರತಕ್ಕಂಥ ಆದಾಯವನ್ನು ಕಡಿಮೆ ಮಾಡಿರತಕ್ಕಂಥ ಬಗ್ಗೆ ಈಗ ಅದನ್ನು ಸಿ.ಬಿ.ಐ. ಎನ್‌ಕ್ವೈರಿ ಮೂಲಕ ವಿಚಾರಣೆ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡುವುದಕ್ಕೆ ಸಾಧ್ಯವೇ? ಅಲ್ಲಿ ಬರತಕ್ಕಂಥ ಆದಾಯ ಹೆಚ್ಚಿಗೆ ಕೂಗುವುದಕ್ಕೆ ತಯಾರು ಇದ್ದರೂ ಕೂಡ ಅಲ್ಲಿ ಪ್ರಿವೆಂಟ್ ಮಾಡಿದ್ದಾರೆ. ಇದು ಏನಾದರೂ ತಮ್ಮ ಗಮನಕ್ಕೆ ಬಂದಿದೆಯೇ ? ಇದರ ಬಗ್ಗೆ ತನಿಖೆಯನ್ನು ನಡೆಸಿ ತಪ್ಪಿತಸ್ಥರು ಯಾರು ಎಂದು ಕಂಡುಹಿಡಿಯುವುದಕ್ಕೆ ಸಾಧ್ಯವೇ ? ಮತ್ತೆ ಅಲ್ಲಿ ರೀ–ಆಕ್ಷನ್‌ನನ್ನು ಮಾಡಿಸಿ ಇನ್ನು ಹೆಚ್ಚು ಆದಾಯ ಬರುವ ರೀತಿಯಲ್ಲಿ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೀರಾ ? ಎರಡನೆಯದು ಸಬ್–ಸಬ್ಸಿಮೆಂಟರಿ "Promotion of liquor sale through Government Agencies", is it not against the policy of our Government, is it not opposed to the policy of our Government? Why should we entertain the sale of liquor through this Sales International, which is a Government owned organisation ? I would like to know, is it the policy of the Government?

ಶ್ರೀ ಎಂ.ವಿ. ರಾಜಶೇಖರಮೂರ್ತಿ.—ಮಾನ್ಯ ಅಧ್ಯಕ್ಷರೇ; ಮಾನ್ಯ ಸದಸ್ಯರು ತುಮಕೂರಿನ ಆಕ್ಷನ್ ಬಗ್ಗೆ ಪ್ರಸ್ತಾಪ ಮಾಡಿದ ವಿಚಾರ ನಿಜ. ಅದು ನನ್ನ ಹತ್ತಿರ ಬಂದಮೇಲೆ ಅದನ್ನು ನಾನು ರಿಜೆಕ್ಟ್ ಮಾಡಿದೆ. ರಿಜೆಕ್ಟ್ ಮಾಡಿದ ಮೇಲೆ ಆಲ್ಲಿ ರೀ–ಆಕ್ಷನನ್ನು ಮಾಡಿ ಎಂದು ನೋಟಿಫೈ ಮಾಡಿಸಿದೆ. ಆದರೆ ಮೊದಲು ಯಾರು ಆಕ್ಷನ್‌ನಲ್ಲಿ ಪಾರ್ಟಿಸಿಪೇಟ್ ಮಾಡಿ ತೆಗೆದುಕೊಂಡಿದ್ದರೋ ಅವರು ಕೋರ್ಟಿಗೆ ಹೋಗಿ ಸ್ಟೇಯನ್ನು ತಂದರು. ಮೊನ್ನೆ ದಿವಸ ನಮ್ಮ ಪರವಾಗಿ ಅದು ತೀರ್ಮಾನವಾಯಿತು. ಮತ್ತೆ

ಅವರು ಬೆಂಚ್‌ಗೆ ಅಪೀಲು ಹೋಗಿದ್ದಾರೆ, ಇವತ್ತಿಗೂ ಕೇಸ್ ನಡೆಯುತ್ತಿದೆ. ಜಡ್ಜ್‌ರವರು ಒಂದು ತೀರ್ಮಾನಕ್ಕೆ ಬಂದಿದ್ದಾರೆ, ನಮಗೆ ಟೆಂಡರನ್ನು ಕೊಡಿ ಎಂದು ಕೇಳುತ್ತಿದ್ದಾರೆ ಸರ್ಕಾರಕ್ಕೆ ನಷ್ಟವಾಗಿದ್ದ ಒಂದು ಕೋಟಿ ರೂಪಾಯಿ ಈಗ ಜಾಸ್ತಿ ಬರುತ್ತಿದೆ ಎಂದು ನಾನು ಅದಕ್ಕೆ ಹೇಳಿದ್ದೆ. ಈ ಕೇಸ್ ಇವತ್ತು ಡಿಸೈಡ್ ಆಗುತ್ತದೆ. ಮತ್ತು ತಪ್ಪು ಮಾಡಿದವರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ, ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದು ಸರ್ಕಾರದ ಗಮನದಲ್ಲಿದೆ. ಮತ್ತು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಏನು ವ್ಯಾಪಾರ ವಹಿವಾಟು ಮಾಡುತ್ತಾರೆ, ಅದರಲ್ಲಿ ತಪ್ಪೇನೂ ಇಲ್ಲ. ಅದು ಒಂದು ವ್ಯಾಪಾರಿ ಸಂಸ್ಥೆ. ಅವಕ್ಕೆ ಲಾಭ ಬರುತ್ತದೆ. ಅಲ್ಲಿ ಒಂದು ಅನುಕೂಲ ಎಂದರೆ ಸೆಕೆಂಡ್ಸ್ ತಡೆಗಟ್ಟುವುದಕ್ಕೆ ಬಹಳ ಮಟ್ಟಿಗೆ ಅನುಕೂಲವಾಗುತ್ತದೆ.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೇ, ಈ ಸೆಕೆಂಡ್ಸ್‌ನ್ನು ತಡೆಗಟ್ಟುವುದರಲ್ಲಿ ತಾವು ಪರಿಪೂರ್ಣವಾಗಿ ಒಂದು ಸಾರ್ಥಕತೆಯನ್ನು ಸಾಧಿಸಿದ್ದೀರಿ. ಆದರೆ ಇವತ್ತು ಆ ಖಾಸಗೀ ಮಾರುಕಟ್ಟೆಯಲ್ಲಿ ಏನು ಸೆಕೆಂಡ್ಸ್ ಹೊರಗಡೆಯಿಂದ ಬರತಕ್ಕಂಥದ್ದು ಇದೆ, ಅದು ಸಾಕಷ್ಟು ಹೇರಳವಾಗಿ ಅದೇ ಬೆಲೆಗೆ ಸಿಗುತ್ತದೆ. ಅಂದಾಗ ಬರತಕ್ಕಂಥ ಇನ್‌ಕಂನಲ್ಲಿ ಇನ್ನು ಸಾಕಷ್ಟು ಕಡಿಮೆ ಎನ್ನತಕ್ಕಂಥದ್ದು ಆಯಿತು. ೩೫೦ ಕೋಟಿ ರೂಪಾಯಿ ಏನು ಇದೆ ಅದನ್ನು ೪೦೦ ಕೋಟಿ ರೂಪಾಯಿಯಂತೆ ತರಿಸುವುದಕ್ಕೆ ಸಾಧ್ಯ ಇದೆ. ಇದನ್ನು ನಿಯಂತ್ರಿಸುವುದಕ್ಕೆ ಸಾಧ್ಯ ಇದೆ. ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ವಿ. ರಾಜಶೇಖರ ಮೂರ್ತಿ.—ಅವರು ಹೇಳಿರತಕ್ಕದ್ದು ಐ.ಎಂ.ಎಲ್. ಬಗ್ಗೆ ಅವರ ಹೊರಗಡೆ ಗೋವಾದಿಂದ, ಮಹಾರಾಷ್ಟ್ರದಿಂದ ಬರುತ್ತಿದೆ. ನಾವು ಎಲ್ಲಾ ಕಡೆ ಸ್ಕ್ವಾಡ್ ಬಿಟ್ಟು ರೈಡ್ ಮಾಡಿಸುತ್ತಿದ್ದೇವೆ. ಕೆಲವು ಗೂಡ್ಸ್‌ಗಳು ಕಾನ್‌ಫಿಸ್‌ಕೇಟ್ ಮಾಡುತ್ತಿದ್ದರು, ಫಾರ್ಟಿಟ್ಯೂಡ್ ಕಂಪನಿಗಳು. ನಮ್ಮಲ್ಲಿ ಏನು ಖರೀದಿಯವರು ಇದ್ದರು ಮತ್ತು ಅವರಿಗೆ ಸಂಬಂಧಪಟ್ಟಿದ್ದನೆಲ್ಲಾ ಕಾನ್‌ಫಿಸ್‌ಕೇಟ್ ಮಾಡಿದ್ದನ್ನು ಹಿಡಿದಿದ್ದೇವೆ. ಲೋಯರ್ ಲೆವೆಲ್‌ನಲ್ಲಿ ನಾವು ಸ್ಟಾಫ್ ಮೇಂಟೇನ್ ಮಾಡಬೇಕು ಎಂದು ಹೊರಟು ಈ ಸ್ಕ್ವಾಡ್ ಏನು ಇದೆ, ಅದು ಚೆನ್ನಾಗಿ ಕೆಲಸ ಮಾಡುವಂತಹ ರೀತಿಯಲ್ಲಿ ಏರ್ಪಾಡು ಮಾಡುತ್ತೇವೆ. ಈ ಸೆಕೆಂಡ್ಸ್ ಐ. ಎಂ. ಎಲ್ ನಲ್ಲಿ ಏನು ಬರುತ್ತಿತ್ತು, ಅದನ್ನು ತಡೆಹಿಡಿಯುತ್ತೇನೆಂದು ನಿಮ್ಮೆಲ್ಲರಿಗೂ ಆಶ್ವಾಸನೆ ಕೊಡುತ್ತೇನೆ.

ಶ್ರೀ ಎ. ಕೆ. ಅನಂತಕೃಷ್ಣ.—ಸೇಂದಿಯಲ್ಲಿ ಆಕ್ಷನ್ ಬಿಡ್ ಏನು ಇದೆ, ಹೆಚ್ಚು ಹಣ ಬರುತ್ತದೆ ಎಂದು ಹೇಳುತ್ತಾ ಇದ್ದೀವೆ. ಇದನ್ನು ಸಂಪೂರ್ಣವಾಗಿ ರೆಕವರಿ ಮಾಡಿಕೊಳ್ಳುವುದಕ್ಕೆ ಸರ್ಕಾರದಿಂದ ಏನಾದರೂ ಗ್ಯಾರಂಟಿ ತೆಗೆದುಕೊಂಡಿದ್ದಾರೆಯೇ?

ಅಧ್ಯಕ್ಷರು.—ನೀವು ಹೇಳಿದ್ದು ದು ನನಗೆ ಅರ್ಥ ಆಗಿಲ್ಲ, ಮಾನ್ಯ ಮಂತ್ರಿಯವರಿಗೂ ಅರ್ಥ ಆಗಿಲ್ಲ ಇನ್ನೊಮ್ಮೆ ಹೇಳಿ?

ಶ್ರೀ ಎ. ಕೆ. ಅನಂತಕೃಷ್ಣ.—ಸೇಂದಿ ಕಾಂಟ್ರಾಕ್ಟ್ ಬಿಡ್ ಅಮೌಂಟ್, ಇದನ್ನು ಸಂಪೂರ್ಣವಾಗಿ ರಿಟಾರ್ಡ್ ಮಾಡುವುದಕ್ಕೆ ಏನಾದರೂ ಗವರ್ನಮೆಂಟ್‌ನಿಂದ ಗ್ಯಾರಂಟಿ ತೆಗೆದುಕೊಂಡಿದ್ದಾರೆಯೇ?

ಅಧ್ಯಕ್ಷರು.—ನೀವು ಶಿಕ್ಷಣಕ್ಕೆ ಸೀಮಿತ ಆಗಿ ಇರಬೇಕಾಗಿತ್ತು....

ಶ್ರೀ ಎಂ. ವಿ. ರಾಜಶೇಖರ ಮೂರ್ತಿ.—ಬ್ಯಾಂಕ್ ಗ್ಯಾರಂಟಿ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಶಿವರಾಮ್.—ತಾಲ್ಲೂಕ್‌ನಲ್ಲಿ ಸಾರಾಯಿಯನ್ನು ಲೈಸೆನ್ಸ್‌ಡ್ ಅಂಗಡಿಯ ಮೂಲಕ ಮಾರಬೇಕೆಂದು ಇದೆ. ಅದಂ ಅಲ್ಲದೇ ಅನಧಿಕೃತವಾಗಿ ಪ್ರತಿ ಊರಿನಲ್ಲಿಯೂ ಸಾರಾಯಿ ಮಾರಾಟ ಆಗುತ್ತಿದೆ. ಇದನ್ನು ಪ್ರಶ್ನೆ ಮೂಲಕ ತಮಗೆ ಕಳಿಸಿಕೊಟ್ಟಿದ್ದೆ. ಉತ್ತರ ಬಂದಿದೆ. ಆದರೆ ಈ ಅನಧಿಕೃತವಾಗಿ ಮಾರುತ್ತಾ ಇರತಕ್ಕದ್ದನ್ನು ನಿಲ್ಲಿಸಿಲ್ಲ. ಈ ಎಕ್ಸೈಜ್ ಕಂಟ್ರಾಕ್ಟರ ಏನು ಮಾಡುತ್ತಿದ್ದಾರೆ ಎಂದರೆ ೩-೪ ಜನ ಲೈಸೆನ್ಸ್ ಇಲ್ಲದೇ ಇರುವವರ ಹತ್ತಿರ ೫ ಸಾವಿರ ಅಡ್ವಾನ್ಸ್ ಕಲೆಕ್ಟ್ ಮಾಡುತ್ತಿದ್ದಾರಂತೆ ಇದಕ್ಕೋಸ್ಕರ ಇವರು ಏನು ಬಿಡ್ ಮಾಡುತ್ತಿದ್ದಾರೋ ಅದಕ್ಕಿಂತ ಹೆಚ್ಚಿನ ಅಡ್ವಾನ್ಸ್ ಕಲೆಕ್ಟ್ ಮಾಡುತ್ತಾರೆ, ಇದರಿಂದ ಹಳ್ಳಿಗಳಲ್ಲಿ ಬಹಳ ತೊಂದರೆಯಾಗುತ್ತಿದೆ. ಗುಂಪುಗಾರಿಕೆಯನ್ನು ಕೈಯೇಟ್ ಮಾಡುತ್ತಿದ್ದಾರೆ. ಇದನ್ನು ಉಳಿಸುವ ವ್ಯವಸ್ಥೆ ಮಾಡಿ. ಇದರಿಂದ ಲಾಭ ಗಳಿಸಿದರೆ ಸರ್ಕಾರಕ್ಕೆ ಉಪಯೋಗ ಆಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ದಯವಿಟ್ಟು ಈ ಅನಧಿಕೃತ ಅಂಗಡಿಗಳನ್ನು ಕಂಟ್ರೋಲ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

SRI M. T. RAJASHEKARAMURTHY.—I have already aletted my staff to go into that question.

ಶ್ರೀ ಎಲ್. ಆರ್. ಶಿವರಾಮೇಗೌಡ.—ಎಕ್ಸೈಜ್‌ನಿಂದ ಲಾಭಿಯನ್ನು ಮಟ್ಟ ಹಾಕಿರುವುದರಿಂದ ೩೦೦ರಿಂದ ೪೨೦ ಕೋಟಿ ರೂಪಾಯಿಗಳವರೆಗೆ ಹೆಚ್ಚಿನ ವರಮಾನ ಬಂದಿದೆ ಎಂದು ಮಾನ್ಯ ಸಚಿವರು ಹೇಳಿದರು. ಹೆಚ್ಚು ಕಷ್ಟದಲ್ಲಿರುವ ಕಾವೇರಿ ಬೇಸಿನ್ ಹಾಗೂ ಇತರ ಪ್ರದೇಶಗಳಲ್ಲಿರುವ ಜನರಿಗೆ ಎಷ್ಟು ಹಣ ಈ ಸಂದರ್ಭದಲ್ಲಿ ಒದಗಿಸಿಕೊಡುತ್ತೀರಿ ಎಂಬುದನ್ನು ಹೇಳಬೇಕು.

ಅಧ್ಯಕ್ಷರು.—ಇದಕ್ಕೆ ಈಗಾಗಲೇ ಹೇಳಿದ್ದಾರೆ...

ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ.

೯೬೬. ಶ್ರೀ ಟಿ. ಬಿ. ಜಯಚಂದ್ರ.—(ಕಳ್ಳಂಬೆಳ್ಳ) ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಪೋಲ್ವೇಜ್ ಇಳಿತವನ್ನು ತಪ್ಪಿಸಲು ಸಿರಾ ತಾಲ್ಲೂಕಿನ ಕಳ್ಳಂಬೆಳ್ಳ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರ್ ಗ್ರಾಮ ಮತ್ತು ಗುಬ್ಬಿ ತಾಲ್ಲೂಕಿನ ಹೊಸಕೆರೆಯಲ್ಲಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿ ಪ್ರಸ್ತಾಪಗಳಿವೆಯೇ?

ಆ) ಇದ್ದರೆ, ಮೇಲೆ ತಿಳಿಸಿರುವ ಸ್ಥಳಗಳಲ್ಲಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಕಾರ್ಯವನ್ನು ಸರ್ಕಾರವು ಯಾವಾಗ ತೆಗೆದುಕೊಳ್ಳುತ್ತದೆ.

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು)—

ಅ) ಸಿರಾ ತಾಲ್ಲೂಕಿನ ಕಳ್ಳಂಬೆಳ್ಳದಲ್ಲಿ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರ್‌ನಲ್ಲಿ ತಲಾ ಒಂದು ೬೬–೧೧ ಕೆ.ವಿ ಸಾಮರ್ಥ್ಯದ ಸಬ್ ಸ್ಟೇಷನ್ ಅನ್ನು ಅನುಕ್ರಮವಾಗಿ ೬.೩ ಎಂ.ವಿ.ಎ ಮತ್ತು ೮ ಎಂ. ವಿ. ಎ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ನೊಂದಿಗೆ ಸ್ಥಾಪಿಸಲು ಉದ್ದೇಶಿಸಲಾಗಿದೆ. ಆದರೆ ಗುಬ್ಬಿ ತಾಲ್ಲೂಕಿನ ಹೊಸಕೆರೆಯಲ್ಲಿ ಸಬ್‌ಸ್ಟೇಷನ್ ಅನ್ನು ಸದ್ಯಕ್ಕೆ ಸ್ಥಾಪಿಸುವ ಉದ್ದೇಶವಿಲ್ಲ.

ಆ) ಕಳ್ಳಂಬೆಳ್ಳದಲ್ಲಿ ಉದ್ದೇಶಿಸಿರುವ ವಿದ್ಯುತ್ ಉಪ ಕೇಂದ್ರದ ಕೆಲಸವನ್ನು ೧೯೯೦–೯೧ನೇ ಸಾಲಿನಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ ಮತ್ತು ಹುಳಿಯಾರ್ ವಿದ್ಯುತ್ ಉಪ ಕೇಂದ್ರದ ಕೆಲಸವನ್ನು ೧೯೯೧–೯೨ನೇ ಸಾಲಿನಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೇ, ಕಳ್ಳಂಬೆಳ್ಳದಲ್ಲಿ ಉದ್ದೇಶಿಸಿರುವ ವಿದ್ಯುತ್ ಉಪ ಕೇಂದ್ರದ ಕೆಲಸವನ್ನು ೧೯೯೦–೯೧ನೇ ಸಾಲಿನಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ ಮತ್ತು ಹುಳಿಯಾರ್ ವಿದ್ಯುತ್ ಉಪ ಕೇಂದ್ರದ ಕೆಲಸವನ್ನು ೧೯೯೧–೯೨ನೇ ಸಾಲಿಗೆ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ ಎಂದು ಉತ್ತರವನ್ನು ಹೇಳಿದ್ದಾರೆ, ಈ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಮಾಡಬೇಕಾದರೆ ತಾವು ತೆಗೆದುಕೊಂಡಿರತಕ್ಕ ಕಾರ್ಯಕ್ರಮಗಳು ಏನು? ತಾವು ಹೇಳಿರತಕ್ಕ ರೀತಿಯಲ್ಲಿ, ನಿಗದಿತ ವೇಳೆಯಲ್ಲಿ ಮುಗಿಸತಕ್ಕ ಆಶ್ವಾಸನೆ ಕೊಡುತ್ತೀರಾ?

ಶ್ರೀ ಎಸ್. ಎಂ. ಯಾಹ್ಯಾ.—ಮೊದಲು ನಾವು ಬರೇ ಕಾರ್ಯ ಮಾಡಿಲ್ಲ. ಕಳ್ಳಂಬೆಳ್ಳದಲ್ಲಿ ಕೆಲಸ ಆಗಬೇಕಾದರೆ ೪೦ ಲಕ್ಷ ರೂಪಾಯಿ ಬೇಕಾಗುತ್ತದೆ. ಈಗ ೩೦ ಲಕ್ಷ ರೂಪಾಯಿ ಕೊಟ್ಟಾಗಿದೆ. ಈ ವರ್ಷ ಅದನ್ನು ಮಾಡಿಕೊಡುತ್ತೇವೆ. ಇನ್ನೂ ಒಂದು ಬರುವ ವರ್ಷ ಮಾಡಿಕೊಡುವ ಎಲ್ಲಾ ವ್ಯವಸ್ಥೆ ಆಗಿದೆ. ಪೂರನೆಯದು ಇದು ಎರಡೂ ಆದ ಮೇಲೆ ತಮಗೆ ಇದು ಯೋಗ್ಯ ಎಂದು ಕಂಡರೆ ಅದನ್ನೂ ಸಹ ಮಾಡಿಕೊಡುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ.—ನನಗೆ ತಮ್ಮ ಉತ್ತರದಿಂದ ಸಮಾಧಾನ ಆಗಿದೆ. ಆಶ್ವಾಸನೆ ಕೊಟ್ಟಿದ್ದೀರಿ, ಕಾರ್ಯ ಆಗುವುದಕ್ಕೆ ಬಹಳ ವಿಳಂಬ ಆಗಬಾರದು. ನಿಗದಿತ ವೇಳೆಗಿಂತ ಇನ್ನೂ ಮೊದಲೇ ಮುಗಿಸತಕ್ಕ ವ್ಯವಸ್ಥೆ ಮಾಡಬೇಕೆಂದು ನನ್ನ ಸಲಹೆ. ಹೊಸಕೆರೆ ಎಂಬ ಜಾಗದಲ್ಲಿ ಖಂಡಿತ ಅವಶ್ಯಕತೆ ಇದೆ. ತಾವು ಅನುಮಾನ ವ್ಯಕ್ತಪಡಿಸುತ್ತಿದ್ದೀರಿ, ಅದಕ್ಕೋಸ್ಕರ ಈ ಪ್ರಶ್ನೆಯನ್ನು ಹೇಳುತ್ತಿದ್ದೇನೆ. ಅದರಲ್ಲಿ ಇವೆರಡಕ್ಕಿಂತಲೂ ಅತಿಶಯವಾಗಿ ಬೈಕ್ಕಾಗಿರತಕ್ಕದ್ದು, ಹೊಸಕೆರೆಯಲ್ಲಿ ಬಿಮನ್ನು ೨೦೦೧ನ ವರ್ಷಕ್ಕೆ ಸೇರಿಸಿಕೊಡುವಂತಹ ಒಂದು ಪ್ರಯತ್ನವನ್ನು ಮಾಡುತ್ತೀರಾ?

ಶ್ರೀ ಎಸ್. ಎಂ. ಯಾಹ್ಯಾ.—ಇದು ಆದ ಮೇಲೆ ಮೂರನೆಯದು.

ಅಧ್ಯಕ್ಷರು.—ಈಗ ಹಾಜರಿರದ ಸದಸ್ಯರ ಹೆಸರನ್ನು ಮತ್ತೊಮ್ಮೆ ಕರೆಯುತ್ತೇನೆ.